# ಗೆಸ್ಟ್

■ **ವಿಕಾಸ್ ನೇಗಿಲೋಣಿ**

ಕಲೆ: ವಿಶ್ವನಾಥ ಎ.ಎಸ್.



ಮನೆಯೆಲ್ಲಾ ಬಿಕೋ ಎನ್ನುತ್ತಿತ್ತು. ವೈಶಾಖದ ಬಿರುಬಿರು ಸೆಕೆ, ರಾತ್ರಿ ಟೆರೇಸಿನ ನೆಲ ಕಾದು ಕೆಳಗಡೆಯ ಅಂತಸ್ತಿಗೆ ಅದರ ಝಳ ರಾತ್ರಿಯೆಲ್ಲಾ ಸಾಕಾಗುವಷ್ಟಿರುತ್ತಿತ್ತು. ವತ್ಸಲಾ ಕೆಲಸಕ್ಕೆ ಹೋಗುವವಳು, ಮೋಹನ್ ಅವನದೇ ಯಾವುದೋ ಮನೆ ವಿನ್ಯಾಸ, ಬ್ಲೂಪ್ರಿಂಟ್ ಅಂತ ತಲೆಕೆಡಿಸಿಕೊಂಡು ಮೂರು ಹೊತ್ತೂ ಲ್ಯಾಪ್ ಟಾಪ್ ಓಪನ್ ಮಾಡಿಟ್ಟುಕೊಂಡು ತೆರೆದೆದೆಯನ್ನು ಕೆರೆದುಕೊಳ್ಳುತ್ತಾ ತನ್ನ ಕೆಲಸದಲ್ಲಿ ಮಗ್ನನಾಗಿರುತ್ತಿದ್ದ.

ಅವರಿಬ್ಬರೂ ಒಪ್ಪಿಕೊಂಡ ಒಂದು ಸಂಗತಿ ಸದ್ಯದ ಪರಿಸ್ಥಿತಿಯಲ್ಲಿ ಅವರಿಬ್ಬರ ಮದುವೆ ನಂತರದ ಔದಾಸೀನ್ಯಕ್ಕೆ ಒಂದು ಸುಂದರ ತಿರುವನ್ನಂತೂ ನೀಡುತ್ತದೆ ಅಂತ ಇಬ್ಬರಿಗೂ ಅರಿವಾಗಿತ್ತು. ಹಾಗಾಗಿ ಆ ಬೇಸಿಗೆಯಲ್ಲೂ ಅವರಿಬ್ಬರೂ ಅದೆಷ್ಟು ಸಂತೋಷದಿಂದ ತಯಾರಿ ನಡೆಸಿದ್ದರೆಂದರೆ ಅಕ್ಕಪಕ್ಕದ ಮನೆಯವರಿಗೂ ಇವರ ಈ ಉತ್ಸಾಹ ಬಹಳ ಅಚ್ಚರಿಯನ್ನು ತಂದಿತ್ತು. ಮೋಹನ್ ಕೊಳ್ಳೆಗಾಲದ ಕಡೆಯವನು, ಈ ಮಾಟ ಮಂತ್ರಗಳ ಬಗ್ಗೆ ಎಲ್ಲಾ ಬಹಳ ರೋಚಕ ಕತೆಗಳು, ಅಧ್ಯಾಯಗಳು ಅವನಿಗೆ ಕೇಳಿಬರುತ್ತಿದ್ದವು. ಅವನ ಬಾಲ್ಯ ಅದೆಷ್ಟು ಸುಂದರವಾಗಿ, ಚಂದಮಾಮ ಪುಸ್ತಕದ ಹದಿನೆಂಟನೇ ಪುಟದ, ಮಾಂತ್ರಿಕನ ಅಧ್ಯಾಯದ ಥರ ನಡೆದು ಬಂದಿತ್ತೆಂದರೆ ಅವನು ಕನಸಲ್ಲೆಲ್ಲಾ ಒಂದೋ ಶಕ್ತಿಶಾಲಿ ಪ್ರೇತಾತ್ಮನ ಪಾತ್ರ ವಹಿಸಿದವನಂತೆ ತೇಲಾಡುತ್ತಿದ್ದ ಇಲ್ಲವೇ ಯಾವುದೋ ಗುಣವಾಗದ ಕಾಯಿಲೆಗೆ ತುತ್ತಾಗಿ ತನ್ನಷ್ಟಕ್ಕೇ ನಗುವ ಕೋಟೆಯ ಹಳೆಯ ರಾಕ್ಷಸನ ಥರ ಇರುತ್ತಿದ್ದ. ಅವನು ಬದುಕಿನಲ್ಲಿ ಸಂತೋಷವಾಗಿರುವುದೇ ಇಂಥ ವಿಚಿತ್ರ ಕನಸುಗಳಲ್ಲಿ ಅಂತ ಗೊತ್ತಿದ್ದಕ್ಕೋ ಏನೋ ಮೊದಮೊದಲು ಅವನನ್ನು ಯಾವ ಆಸ್ಪತ್ರೆಗೆ ಕಳಿಸೋಣ ಅಂತ ಚಿಂತೆ ಹತ್ತಿಸಿಕೊಂಡ ಪೋಷಕರು ಕ್ರಮೇಣ ಅವನನ್ನು ಅವನಷ್ಟಕ್ಕೇ ಬಿಟ್ಟರು. ಅವನ ಕನಸಿನ ಹುಚ್ಚುಗಳು ವಿಪರೀತವಾಗುವ ಮುಂಚೆ ಅವನು ದೊಡ್ಡವನಾದ, ಅವನ ಮಾಂತ್ರಿಕ ಅವಾಸ್ತವ ಹುಚ್ಚಾಟಗಳೆಲ್ಲಾ ಬದಲಾವಣೆ ಕಂಡುಕೊಂಡವು. ಅವನು ನಿಧಾನ ಕ್ಲಾಸ್‌ನಲ್ಲಿ ಚೆನ್ನಾಗಿ ಓದುವುದಕ್ಕೂ ಪ್ರಾರಂಭ ಮಾಡಿದ. ಅವನಿಗೆ ಮನೆಯ ವಿನ್ಯಾಸಗಳ ಬಗ್ಗೆ ಎಷ್ಟೊಂದು ಆಸಕ್ತಿ ಮೂಡಿತೆಂದರೆ ಅವನು ಎಷ್ಟೋ ಸಲ ಕೋಲಾರದ ಕಾಲೇಜಿನಲ್ಲಿ ಓದುವುದಕ್ಕೆ ಪಿಜಿಯಲ್ಲಿ ತಂಗಿದ್ದಾಗೆಲ್ಲಾ ಇದ್ದಕ್ಕಿದ್ದಂತೇ ಬಸ್ಸುಹತ್ತಿ ಬೆಂಗಳೂರಿಗೆ ಹೊರಟು ಬಂದು, ಸಾಲು ಸಾಲು ಮನೆಗಳ, ತರಹೇವಾರಿ ವಿನ್ಯಾಸಗಳ ಕಡೆ ಆಕರ್ಷಿತನಾಗಿ ದಿನವಿಡೀ ನೋಡುತ್ತಾ ನಿಂತುಬಿಟ್ಟುರುತ್ತಿದ್ದ.

ಅವನಿಗೆ ಚಂದಮಾಮ ಕತೆಗಳಲ್ಲಿ ಬರುವ ರಾಜಕುಮಾರನ ಏಳು ಸುತ್ತಿನ ಕೋಟೆ, ಅಲ್ಲೆಲ್ಲೋ ಕೋಟೆಯ ತುದಿಗೆ ದಿನವೂ ಬಂದು ಕೂರುವ ರಣಹದ್ದಿನ ನಿಶ್ಚಲ ಕಣ್ಣುಗಳೆಲ್ಲಾ ಆವರಿಸಿಕೊಂಡು ವಿಚಿತ್ರವಾದ ಮನೆಗಳನ್ನು ನಿರ್ಮಿಸಿಬಿಡಬೇಕು ಅಂತ ಆಸೆ ಹತ್ತಿಬಿಡುತ್ತಿತ್ತು. ಹೀಗೆ ಅವನು ಆರಿಸಿಕೊಂಡಿದ್ದು ಗೃಹವಿನ್ಯಾಸ ಕೋರ್ಸು ಓದನ್ನು. ಮನೆಯನ್ನು ವಿನ್ಯಾಸ ಮಾಡುವುದೆಂದರೆ ಬಿಸಿಲಲ್ಲಿ ನಿಂತುಕೊಂಡು ಕಟ್ಟಡ ಕೆಲಸ ಮಾಡಿಸೋ ಕಂಟ್ರಾಕ್ಟರ್ ಕೆಲಸ ಅಂತಲೇ ತಿಳಿಯುವಷ್ಟು ಮುಗ್ಧತೆ ಅವನ ಅಪ್ಪಾಮ್ಮನಿಗೆ ಇದ್ದರೂ ಕ್ರಮೇಣ ಅದೊಂದು ಎಂಥ ದೊಡ್ಡ ಕೆಲಸ, ಎಷ್ಟು ದುಬಾರಿ ಕೋರ್ಸು ಮತ್ತು ಅದರಿಂದ ಎಂಥ ಆದಾಯವಿದೆ ಅಂತ ಮೋಹನನ ಪೋಷಕರಿಗೆ ಅರಿವಾಯಿತು. ಹಾಗಾಗಿ ಅವನಿಗೋಸ್ಕರ ನಾಲ್ಕು ಲಕ್ಷವನ್ನಂತೂ ಅವರು ಖರ್ಚು ಮಾಡಿದರು, ಅದು ಅವರಿಗೆ ಅಂಥ ಮೋಸವನ್ನೂ ಮಾಡಲಿಲ್ಲ, ಅವನ ಬಾಲ್ಯದಲ್ಲಿ ಕಂಡುಂಡ ಹುಚ್ಚಾಟಗಳಿಗಿಂತ ಆದಾಯ ಹುಟ್ಟುವ ಹುಚ್ಚಾಟವೆಂಬ ಕಾರಣಕ್ಕಾಗಿ ಮೋಹನ ಯಶಸ್ವಿಯಾಗಿ ತನ್ನ ಕೋರ್ಸು ಮುಗಿಸಿಕೊಂಡ.

ಮೊದಲು ಸಾಕಾರಗೊಳಿಸಿದ ಅವನ ವಿನ್ಯಾಸದ ಮನೆ, ಥೇಟ್ ಅವನ ಕನಸಿನಂತೇ ಇತ್ತು. ರಾಜಕುಮಾರನ ಕೋಟೆಯಂಥದ್ದೇ ಒಂದು ಮನೆಯ ವಿನ್ಯಾಸವನ್ನು ಶ್ರೀಮಂತರರೊಬ್ಬರಿಗೆ ರೂಪಿಸಿಕೊಟ್ಟ. ಅದಕ್ಕೆ ಮುಖದ್ವಾರ ದಲ್ಲಿ ನಿಶ್ಚಲ ಕಣ್ಣುಗಳುಳ್ಳ ಒಂದು ರಣಹದ್ದನ್ನೂ ಚಿತ್ರಿಸಿಕೊಟ್ಟ. ಅದೇ ಥರ ಕಟ್ಟಡವೂ ನಿರ್ಮಾಣಗೊಂಡಿತು, ಅದ್ದೂರಿಯಾಗಿ ಆ ಮನೆ ಪ್ರವೇಶ ನಡೆದಿದ್ದಲ್ಲದೇ ಇವನಿಗೆ ಮೊದಲ ದುಬಾರಿ ಸಂಬಳವೇ ಸಂದಾಯವಾಯಿತು. ಆ ಮನೆ ಪ್ರವೇಶಕ್ಕೆ ತಂದೆತಾಯಿಯನ್ನೂ ಕರೆದೊಯ್ದಿದ್ದ ಮೋಹನ ಮರಳಿ ಬರುವಾಗ ಉದ್ದಕ್ಕೂ ತುಂಬ ಬೈಸಿಕೊಂಡೇ ಬಂದಿದ್ದ. ರಣಹದ್ದು ಎನ್ನುವ ಅಪಶಕುನ ಪಕ್ಷಿಯ ಪ್ರತಿಕೃತಿಯನ್ನು ಅದೇಕೆ ಅವರ ಮನೆಯ ಎದುರು ಹಾಕೋದಕ್ಕೆ ಐಡಿಯಾ ಕೊಟ್ಟೆ ಅಂತ ಅಪ್ಪಎಷ್ಟು ಕೂಗಾಡಿದರೆಂದರೆ ನಿನ್ನ ವೃತ್ತಿ ಇಷ್ಟೆಲ್ಲಾ ಹಣ ಕೊಟ್ಟು, ಓದಿಸಿ, ಹಾಳಾಗುತ್ತಿದೆ ಅಂತ ವ್ಯಥೆಪಟ್ಟು ಊರಿಗೇ ವಾಪಸಾಗಿಬಿಟ್ಟರು. ಎಂಥ ವಿಚಿತ್ರವೆಂದರೆ ಆ ರಣಹದ್ದು ಅಪ್ಪನ ಮಾತನ್ನು ಅದೇನು ಸಿಟ್ಟಿನಲ್ಲಿ ಕೇಳಿಸಿಕೊಂಡಿತೋ ಏನೋ, ಆ ಶ್ರೀಮಂತನ ದೆಸೆ ನಿಜಕ್ಕೂ ತಿರುಗಿಹೋಯಿತು. ರಾಜಕುಮಾರನಿಗೆ ಅಲ್ಲೆಲ್ಲೋ ಆಳದಲ್ಲಿ ಏಳು ಕೊಪ್ಪರಿಗೆ ಹೊನ್ನು ಸಿಗುವ ಹಾಗೆ ಏನೋ ದೊಡ್ಡ ಹಣದ ಗಂಟೇ ಸಿಕ್ಕಿತಂತೆ ಆ ಮನೆಯವರಿಗೆ. ನೀವು ಬರೇ ಕಟ್ಟಡ ವಿನ್ಯಾಸಕರಲ್ಲ, ವಾಸ್ತುತಜ್ಞರೂ ಹೌದು ಅಂತ ಆ ವ್ಯಕ್ತಿ ಬಂದು ಸರ್ಟಿಫಿಕೆಟ್ ಕೊಟ್ಟು, ಮತ್ತಷ್ಟು ಹಣವನ್ನೂ ಫಲ ತಂಬೂಲದೊಂದಿಗೆ ಮೋಹನನಿಗೆ ಕೊಟ್ಟು ಹೋದ.

ಈ ಶಾಕ್‌ನಿಂದ ಮೋಹನನ ಅಪ್ಪಪಾಪ ಇನ್ನೂ ಹೊರಬಂದಂತಿಲ್ಲ.

ಮೋಹನ ಕ್ರಮೇಣ ಎಷ್ಟೊಂದು ಪ್ರಖ್ಯಾತ ಗೃಹ ವಿನ್ಯಾಸಕನಾದ ಎಂದರೆ ನಗರದ ತುಂಬ ವಿಚಿತ್ರ ಕನಸಿನ ಮನೆಗಳಿಗಾಗಿ ಬೇಡಿಕೆ ಬರಹತ್ತಿದವು. ಮಕ್ಕಳು ಕಿರುಚುವ, ಹೆಂಡತಿ ಜಗಳ ಆಡುವ, ಗಂಡ ಬಾಯಿಗೆ ಬಂದಂತೆ ಪಕ್ಕದ ಮನೆಯವರಿಗೆ ಕೇಳುವಂತೆ ಹೆಂಡತಿಗೆ ಬೈಯುವ, ಏನೋ ಹೊಡೆದಂಥ ಸದ್ದು ರಾತ್ರಿ ಕೇಳುವ, ಸದಾ ಕಿರುಚಾಡುವ, ದೈತ್ಯಕಾರುಗಳು ಕರ್ಕಶವಾಗಿ ಹಾರ್ನ್ ಮಾಡುವ, ಬ್ಯಾಚುಲರು ಗೇಟನ್ನು ರಪ್ಪಂತ ಹಾಕುವ